ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ
ಸಿ.ಸಿ.ನ ಂ. 4977/2016

ಹೆಸರು ಃ ಭಾಸ್ಕರಾಚಾರ್
ತಂದೆಯ ಹೆಸರು ಃ ಸಿದ್ದೇಶ್ವರ ಚಾರ್
ವಯಸ್ಸು ಃ 46
ಉದ್ಯೋಗ ಃ ಖಾಸಗಿ ವ್ಯಾಪಾರ
ಸ್ಥಳ ಃ ದೊಡ್ಡಬಳ್ಳಾಪುರ

ಪಿಡಬ್ಲೂಃ 1 ಸಿಡಬ್ಲೂ ಃ 1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 15-12-2025.

ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ

ಚಾಸಾ 2 ರಿಂದ ಚಾಸಾ 4 ರವರ ಪರಿಚಯ ಇಲ್ಲ. ಮೃತ ಪ್ರಸನ್ನ ಕುಮಾರ ನನಗೆ ಗೊತ್ತು. ನನಗೆ ಈ ಪ್ರಕರಣದ ವಿಚಾರ ಗೊತ್ತಿಲ್ಲ. ಪ್ರಸನ್ನ ಕುಮಾರ ರವರು ಮೃತಪಟ್ಟಿರುವ ವಿಚಾರ ನನಗೆ ಗೊತ್ತು. ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 7-8 ವರ್ಷಗಳ ಹಿಂದೆ ಆಸ್ಪತ್ರೆಯ ಬಳಿ ಪೋಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ, ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಅಪಘಾ ತ ಸಂಬಂಧ ನಾನು ಪೋಲೀಸರಿಗೆ ದೂರು ನೀಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಿಂದೆ ನೋಡಿಲ್ಲ. ಕಡತದಲ್ಲಿರುವ ವಾಹನದ ಛಾಯಾ ಚಿತ್ರವನ್ನು ನೋಡಿ ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಕೋರಿದ್ದು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುವ ಕಾರಣ ಮಾನ್ಯ ಎಪಿಪಿರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯ ಸರ್ಕಾರಿ ಅಭಿಯೋಜರಿಂದಃ

ದಿನಾಂಕ 30-03-2016 ರಂದು ಸಂಜೆ 6.15 ಗಂಟೆ ಸಮಯದಲ್ಲಿ ನಾನು, ಚಾಸಾ 2 ರಿಂದ ಚಾಸಾ 4 ಹಾಗೂ ಪ್ರಸನ್ನಕುಮಾರ್ ರವರು ಆರೋಪಿಯ ವಾಹನ ಕೆಎ 43 ಎಲ್ 6878 ರಲ್ಲಿ ಆರೋಪಿ ಚಾಲನೆ ಮಾಡಿಕೊಂಡು ದೇವನಹಳ್ಳಿ ಯಿಂದ ನಂದಿ ದೇವಸ್ಥಾನಕ್ಕೆ ಹೋಗಿ ವಾಪಸ್ ಬೆಂಗಳೂರು ಕಡೆಗೆ ಬರುತ್ತಿದ್ದಾಗ ದೇವನಹಳ್ಳಿಯ ಕನ್ನಮಗಲ ಗೇಟ್ ಬಳಿ ಆರೋಪಿ ನಮ್ಮ ವಾಹನವನ್ನು ಆರೋಪಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ವಾಹನದ ನಿಯಂತ್ರಣ ತತಪ್ಪಿ ಡಿವೈಡರ್ ಮೇಲೆ ಹತ್ತಿ ರಸ್ತೆಯ ವಿರುದ್ದ ದಿಕ್ಕಿಗೆ ಪಲ್ಟಿಯಾಗಿ ಬಿದ್ದು ಅಪಘಾತ ಆಯಿತು ಎಂದರೆ ಸರಿಯಲ್ಲ. ಇದರಿಂದ ಪ್ರಸನ್ನಕುಮಾರ್ ರವರಿಗೆ ತಲೆಗೆ ತೀವ್ರ ತರವಾದ ಪೆಟ್ಟಾಗಿ ಚಾಸಾ 2 ರವರಿಗೂ ಪೆಟ್ಟುಗಳಾಗಿದ್ದವು ಎಂದರೆ ಸರಿಯಲ್ಲ. ಈ ಅಪಘಾತದಿಂದ ಪ್ರಸನ್ನಕುಮಾರ್ ರವರು ಆಸ್ಪತ್ರೆಯಲ್ಲಿ ಚಿಕಿತ್ತೆ ಪಡೆಯುತ್ತಿದ್ದಾಗ ಮೃತಪಟ್ಟರು ಎಂದರೆ ಸರಿಯಲ್ಲ. ಈ ಸಂಬಂಧ ನಾನು ಅದೇ ದಿನ ರಾತ್ರಿ 11.30 ಗಂಟೆ ಸಮಯದಲ್ಲಿ ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಅಪಘಾತ ಆಗಿದೆ ಎಂದು ನಿಪಿ-1 ರಂತೆ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲ ರಿಂದ ಃ ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ